ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ06-04-2026 ರಂದು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎ ಜಿ ಪಿ ರವರಿಂದ

ಈ ದಾವೆಗೆ ಸಂಬಂಧಿಸಿದಂತೆ ಈಗಾಗಲೇ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ಎರಡು ಜ್ಞಾಪನ ಪತ್ರಗಳನ್ನು ಕ್ರಮವಾಗಿ ನಿ.ಡಿ-1 ಮತ್ತು ನಿ.ಡಿ-2 ಎಂದು, ದಿಃ 01-01-2008 ರ ಅರ್ಜಿಯ ದೃಢಿಕೃತ ನಕಲು ಪ್ರತಿಯನ್ನು ನಿ.ಡಿ-3 ಎಂದು, ನಮೂನೆಯ ದೃಢಿಕೃತ ಪ್ರತಿಯನ್ನು ನಿ.ಡಿ- 4 ಎಂದು, ಅನುದಾನ ಮಂಜೂರಾತಿ ಆಗಿರುವ ಬಗ್ಗೆ ಪತ್ರವನ್ನು ನಿ.ಡಿ-5 ಎಂದು, ಎರಡು ಪಹಣಿ ಪತ್ರಿಕೆಗಳ ದೃಡಿಕೃತ ಪ್ರತಿಗಳನ್ನು ಕ್ರಮವಾಗಿ ನಿ.ಡಿ-6 ಮತ್ತು 7 ಎಂದು, ದಿಃ 19-02-2007 ರ ನಮೂನೆ ಪತ್ರದ ದೃಡಿಕೃತ ಪ್ರತಿಯನ್ನು ನಿ.ಡಿ-8 ಎಂದು, ಐದು ಶಿಕ್ಷಕರ ಹಾಜರಿವಹಿಯ ದೃಢಿಕೃತ ಪ್ರತಿಯನ್ನು ಕ್ರಮವಾಗಿ ನಿ.ಡಿ-9 ರಿಂದ ನಿ.ಡಿ-13 ಎಂದು, 18 ಪುಟಗಳುಳ್ಳ ವಿದ್ಯಾರ್ಥಿಗಳ ದಾಖಲಾತಿ ರೆಜಿಸ್ಟರ ದೃಢಿಕೃತ ನಕಲು ಪ್ರತಿಯನ್ನು ನಿ.ಡಿ-14 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ವಾದಿ ಪರ ವಕೀಲರು ನಿಡಿ-1 ದಾಖಲೆಗೆ ತಕರಾರು ಇದೆ ಎಂದು ತಿಳಿಸಿರುತ್ತಾರೆ.)

ಆದ್ದರಿಂದ ಪ್ರತಿವಾದ ಪತ್ರದಲ್ಲಿ ಕೇಳಿರುವಂತೆ ದಾವೆಯನ್ನು ವಜಾ ಮಾಡಬೇಕಾಗಿ ಕೋರುತ್ತೇನೆ.

**ಪಾಟೀಸವಾಲುಃ ವಾದಿ ಪರ ವಕೀಲರಿಂದಃ**

ವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು ಆಲಿಸಿ ಮೂಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಸಾ.ಓ.ಹೇ.ಸ.ಒ

ಸಹಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ

ಸಿದ್ದಾಪುರ